ವಾರದ ಪತ್ರ

## ಕೈದಿಗಳಲ್ಲಿಯೂ ತಾರತಮ್ಯದ ಮೇಲುಗೈ



ಝೀ ಕನ್ನಡದ 'ಪುಟ್ಟಕ್ಕನ ಮಕ್ಕಳು'ನಲ್ಲಿ ರಾಧಾ ಮಾಡಿದ ತಪ್ಪಿಗೆ ಜೈಲು ಸೇರಿದರೂ, ಮಸಲತ್ತು ಮಾಡುವುದನ್ನು ನಿಲ್ಲಿಸುವುದಿಲ್ಲ. ಅವಳಿಗೆ ಹಳೆಯ ಮತ್ತು ಹೊಸ ಕೈದಿಗಳ ಸಹಕಾರವೂ ಸಿಗುತ್ತದೆ. ದುರಂತವೆಂದರೆ ಆಕೆ ಮತ್ತು ಸೋನಿಯಾಗೆ ಜೈಲಿನ ಸಮವಸ್ತ್ರ ಒದಗಿಸುವಲ್ಲಿ ನಿರ್ದೇಶಕರು ಸೋಲುತ್ತಾರೆ. ಸಹ ಕೈದಿಗಳು ಬಿಳಿಯ ಸೀರೆ ಉಟ್ಟರೆ ಇವರಿಬ್ಬರೂ ಚೂಡಿದಾರಗಳಲ್ಲೇ ಕಾಣಿಸಿಕೊಳ್ಳುತ್ತಿದ್ದಾರೆ. ಅವಳ ಖದರಿಗೆ ಜೈಲ್ ಅಧಿಕಾರಿಗಳು ಬೆದರಿದರೆ? ಅದೇ ರೀತಿ 'ಲಕ್ಷ್ಮೀ ನಿವಾಸ'ದಲ್ಲಿ ಮಂತ್ರಿ ಮಗ ಸಿದ್ದೇಗೌಡರು ಜೈಲಿಗೆ ಹೋದಾಗ ಜೈಲಿನಲ್ಲಿ ಮಲಗಲು ಬೆಡ್ ಒದಗಿಸಲಾಗುತ್ತದೆ.

—ವಾ. ಮುರಳೀಧರ, ತೀರ್ಥಹಳ್ಳಿ

## ಆಷಾಢ ಎಂಬ ಮೌಢ್ಯ ಕಳೆಯಲಿ

ಈಗ ಆಷಾಢ ಮಾಸ ಪ್ರಾರಂಭವಾಗಿದೆ. ಈಚೆಗೆ ಕಲರ್ಸ್ ಕನ್ನಡದ 'ಮಹರ್ಷಿ ದರ್ಶನ' ಕಾರ್ಯಕ್ರಮದಲ್ಲಿ ಆಷಾಢ ಮಾಸದಲ್ಲಿ ಶುಭಕಾರ್ಯಗಳು ಮಾಡಬೇಕೇ ಅಥವಾ ಬೇಡವೇ? ಎಂಬ ಬಗ್ಗೆ ಉಪಯುಕ್ತ ಮಾಹಿತಿಗಳನ್ನು ನೀಡಿದರು. ಇಂದಿನ ಕಾಲಘಟ್ಟಕ್ಕೆ ಸೂಕ್ತ ರೀತಿಯಲ್ಲಿ ಶುಭ ಕಾರ್ಯಗಳು ಮಾಡಬಹುದು ಎಂದು ಹೇಳಿದ್ದು ಸರಿ ಎಂದೆನಿಸಿತು. ಆಷಾಢ ಅಶುಭ ಮಾಸ, ಈ ಸಂದರ್ಭದಲ್ಲಿ ಯಾವುದೇ ಕಾರಣಕ್ಕೂ ಶುಭ ಕಾರ್ಯ ಮಾಡಬಾರದೆಂಬ ನಂಬಿಕೆ ಜನರಲ್ಲಿದೆ. ಅಂತಹ ಮೌಢ್ಯದಿಂದ ಅವರನ್ನು ಹೊರ ತರಲು ಇಂತಹ ಕಾರ್ಯಕ್ರಮಗಳ ಮೂಲಕ ವೈಚಾರಿಕ ಅರಿವು ಮೂಡಿಸುವುದು ಅಗತ್ಯ ಎಂದೆನಿಸಿತು.

—ಅನುರಾಧ ಟಿ., ದಾವಣಗೆರೆ

## ಇದು ಅಂಧಕಾರದ ಪರಮಾವಧಿ

ಮಹಿಳೆಯ ಪತಿ ಸತ್ತ ಎನ್ನುವ ಕಾರಣಕ್ಕೆ ಆಕೆಯ ಕೇಶಮುಂಡನ ಮಾಡಿಸಿ, ಬಳೆ, ಕುಂಕುಮ, ಹೂವು ಎಲ್ಲವನ್ನು ತೆಗೆಸುವುದು, ಕೆಂಪು ಸೀರೆ ಉಡಿಸಿ ಮೂಲೆಯಲ್ಲಿ ಕೂರಿಸುವುದು, ಆಕೆಯನ್ನು ಮನೆಗೆಲಸಕ್ಕೆ ಮಾತ್ರ ಸೀಮಿತಗೊಳಿಸುವ ಕಾಲವೊಂದಿತ್ತು. ಸಹಗಮನದಂತಹ ಕರಾಳ ಆಚರಣೆಯನ್ನು ಮೀರಿದ್ದರೂ ಇಂತಹ ಅಮಾನವೀಯ ಪದ್ಧತಿ ಉಳಿದಿತ್ತು. ಆ ಕೂಪದಿಂದ ಅವಳನ್ನು ಹೊರತರಲು ಅನೇಕ ಸುಧಾರಕರು ಅವಿರತ ಶ್ರಮಿಸಿ ಸಫಲರಾಗಿದ್ದಾರೆ.

ಈ ಬಗ್ಗೆ ಜನರೂ ಜಾಗೃತವಾಗಿದ್ದಾರೆ ಎಂಬುದಂತು ಸತ್ಯ. ಹೀಗಿದ್ದೂ ಕಲರ್ಸ್ ಕನ್ನಡದ 'ನಿನಗಾಗಿ' ಧಾರಾವಾಹಿಯಲ್ಲಿ ಬರುವ 'ವಿಧವೆಶಾಸ್ತ್ರ' ನಿಜಕ್ಕೂ ಅಮಾನವೀಯವಾಗಿದೆ. 'ಗಂಡ ಕಟ್ಟಿದ ತಾಳಿ, ಕಾಲುಂಗುರ ಬೇಕಿದ್ದರೆ ತೆಗೆಯಿರಿ. ಆದರೆ ಕುಂಕುಮ, ಹೂವು, ಬಳೆಗಳು ಅವಳ ಹಕ್ಕು' ಎಂದು ಹೇಳುವ ರಚನಾ ಮಾತುಗಳು ಸರಿಯಾಗಿವೆ.

ವಿಧುರನಿಗೊಂದು ನ್ಯಾಯ, ವಿಧವೆಗೊಂದು ನ್ಯಾಯವಾ?' ಮೌಢ್ಯವನ್ನು ಪುಷ್ಟೀಕರಿಸುವುದಿಲ್ಲ ಎಂಬ ವಾಕ್ಯಗಳು ತೆರೆಯಲ್ಲಿ ಬಿತ್ತರಿಸಿದರೂ, ನಾವು ನೋಡುತ್ತಿರುವುದು ಸುಳ್ಳಾ? ಇಂಥ ಹೀನ ಸಂಪ್ರದಾಯಕ್ಕೆ ದಯವಿಟ್ಟು ಕಡಿವಾಣ ಹಾಕಿ.

—ಕೆ. ಮನೋಜ್ ಕುಮಾರ್, ಬೆಂಗಳೂರು

## ಮೆರೆದ ಸಬಲಾಶ್ರಮದ ಕೌಶಲ್ಯ

ಚಂದನದ 'ಥಟ್ ಅಂತ ಹೇಳಿ' ತಂಡ ಬೆಂಗಳೂರಿನ ಬಸವನಗುಡಿ ಅಬಲಾಶ್ರಮಕ್ಕೆ ಭೇಟಿ ನೀಡಿ ಪರಿಚಯ ಮಾಡಿಕೊಟ್ಟಿದ್ದು ವಿಶೇಷವಾಗಿತ್ತು. 120 ವರ್ಷಗಳ ಹಿಂದೆ ವೆಂಕಣ್ಣ ಶೇಷ ದಂಪತಿ ಪ್ರಾರಂಭಿಸಿದ ಆ ಸಂಸ್ಥೆ ಸಾವಿರಾರು ಹೆಣ್ಣುಮಕ್ಕಳಿಗೆ ಆಶ್ರಯ ಕೊಟ್ಟು ಅವರನ್ನು ಸ್ವಾವಲಂಬಿಗಳನ್ನಾಗಿ ರೂಪಿಸಿದೆ. ಆಶ್ರಮದ ನಿವಾಸಿಗಳ ಆಸಕ್ತಿಗೆ ಅನುಗುಣವಾಗಿ ಕೌಶಲ್ಯದ ತರಬೇತಿ ಕೊಟ್ಟು ಹಣ ಗಳಿಸುವ ಉದ್ಯೋಗವನ್ನು ಕಲ್ಪಿಸಿದ್ದಾರೆ. ಶೇಷಣ್ಣ ಅವರು ಆ ಕಾಲದಲ್ಲೇ ವಿಧವಾ ವಿವಾಹ ಮಾಡಿಕೊಂಡಿದ್ದರು. ನಿಜಕ್ಕೂ ಇದು ಮಹಿಳಾ ಸಬಲೀಕರಣದ ಹೆಮ್ಮೆಯ ತಾಣ ಎಂದೆನಿಸಿತು.

—ಭಾರತೀ ಗಂಗಾಧರ್, ಬೆಂಗಳೂರು

## ಹೃದಯದ ಮಾತಿಗೆ ದನಿಯಾಯಿತು

ಇತ್ತೀಚಿನ ದಿನಗಳಲ್ಲಿ ಹೃದಯ ಬೇನೆಯ ಸಾವುಗಳು ಆಘಾತವನ್ನು ಉಂಟುಮಾಡಿದೆ. ಕಿರಿವಯಸ್ಸಿನ ಮಕ್ಕಳಲ್ಲಿಯೇ ಹೆಚ್ಚಾಗಿ ಹೃದಯಾಘಾತ, ಹೃದಯಸ್ತಂಭನದಿಂದ ಸಾವುಗಳು ಸಂಭವಿಸುತ್ತಿವೆ. ಇದಕ್ಕೆ ಕಾರಣ ಮತ್ತು ಪರಿಹಾರವನ್ನು ಹುಡುಕುವ ನಿಟ್ಟಿನಲ್ಲಿ ಸರ್ಕಾರ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿಲ್ಲ ಎಂದೇ ಅನ್ನಿಸುತ್ತಿದೆ. ಈ ಬಗ್ಗೆ ಗಂಭೀರವಾಗಿ ಯೋಚಿಸಬೇಕಾಗಿದೆ. ಹೃದಯ ಬೇನೆಗೆ ಕಾರಣವಾಗುವ ಆಹಾರ ಪದಾರ್ಥಗಳ ಮಾರಾಟ ಮತ್ತು ಜಾಹೀರಾತು ನಿಷೇಧಿಸುವುದೂ ಸೂಕ್ತ ಎಂದೆನಿಸುತ್ತದೆ. ಈ ಬಗ್ಗೆ ಟೀವಿ 9 ಉಪಯುಕ್ತ ಕಾರ್ಯಕ್ರಮ ಮಾಡಿತ್ತು.

—ಹನುಮಂತಪ್ಪ ಕೊಳಗಿ, ಸಾಗರ

## ಜನುಮ ತಿನ್ನದೆ ಮುಗೀತು

ಕಲರ್ಸ್ ಕನ್ನಡದ 'ನೂರು ಜನ್ಮಕೂ' ಧಾರಾವಾಹಿಯನ್ನು ವಾರದಲ್ಲಿ ಎರಡೇ ದಿನಕ್ಕೆ ಸೀಮಿತಗೊಳಿಸಿತ್ತು. ಕ್ರಮೇಣ ಅದಕ್ಕೆ ಮುಕ್ತಿ ಸಿಗುವಂತೆ ಮಾಡಿದರು. 'ನೂರು ಜನ್ಮಕೂ ನೂರಾರೂ ಜನ್ಮಕೂ' ಬಿಡೆನು ನಿನ್ನ ಪಾದ ಎಂದು ರಾಯರ ಮೊರೆ ಹೋಗಿದ್ದು ಸಾರ್ಥಕ ಎನಿಸಿತು.

—ರಘುನಾಥ ರಾವ್ ತಾಪ್ಸೆ, ದಾವಣಗೆರೆ

## ಶುಭೋದಯದಲ್ಲಿ ಸುಂದರ ಕಥನ

ಚಂದನದ 'ಶುಭೋದಯ ಕರ್ನಾಟಕ' ಕಾರ್ಯಕ್ರಮದಲ್ಲಿ ಹೆಣ್ಣುಮಕ್ಕಳಿಬ್ಬರನ್ನು ಪರಿಚಯ ಮಾಡಿಸಿದ್ದು ಶ್ಲಾಘನೀಯ. ದೃಷ್ಟಿ ಕಳೆದುಕೊಂಡ ರಮಾ ಫಣಿ ಭಟ್ ಮತ್ತು ಸ್ವಪ್ನ ನಾಯಕ್ ಅವರ ಸ್ಪಂದನೆ ಕೂಡ ಚೆನ್ನಾಗಿತ್ತು. ರಮಾ ಫಣಿ ಭಟ್ ಬಾಲ್ಯದಲ್ಲಿಯೇ ದೃಷ್ಟಿಯಿಂದ ವಂಚಿತರಾದರೂ, ತಮ್ಮ ಅಂತರ್ ದೃಷ್ಟಿಯಿಂದ ಕಲ್ಪಿಸಿಕೊಂಡು ಕವನಗಳನ್ನು ರಚಿಸಿದ ಕಥೆ ಕೇಳಿ ಸಂತೋಷವಾಯಿತು. ಸ್ವಪ್ನಾ ಅವರು ಸುಮಧುರ ಸಂಗೀತ, ವಚನಗಳನ್ನು ತುಂಬ ಚೆನ್ನಾಗಿ ಹಾಡಿದರು. ಇಂತಹ ಎಲೆಮರೆಯ ಪ್ರತಿಭೆಗಳನ್ನೇ ಹೆಚ್ಚಾಗಿ ಪರಿಚಯ ಮಾಡಿಕೊಡಬೇಕೆಂದು ಕೋರಿಕೆ.

—ಕಮಲಾದೇವಿ ರಾಜಶೇಖರ ಹಳ್ಳೂರ್

## ಪೌರಾಣಿಕ ಕಥೆಗೂ ಸರ್ಜರಿ

ಸ್ಟಾರ್ ಸುವರ್ಣದಲ್ಲಿ ಪೌರಾಣಿಕ ಪ್ರಧಾನ 'ಉಧೋ ಉಧೋ ರೇಣುಕಾ ಯಲ್ಲಮ್ಮ' ಮತ್ತು 'ಶ್ರೀ ದೇವಿ ಮಹಾತ್ಮೆ' ಧಾರಾವಾಹಿ ಪ್ರಸಾರ ಆಗುತ್ತಿವೆ. ಅದರಲ್ಲಿ ಅಭಿನಯಿಸುವ ಕೆಲ ನಟ ನಟಿಯರಿಗೆ ಅನುಭವದ ಕೊರತೆ ಎದ್ದು ಕಾಣುತ್ತದೆ.

ಅದರಿಂದ ಸಂಭಾಷಣೆ ತೀರಾ ಕೃತಕ ಎಂದೆನಿಸುತ್ತದೆ. ಇತ್ತ ಸಾಮಾಜಿಕವೂ ಅಲ್ಲದ ಅತ್ತ ಪೌರಾಣಿಕವೂ ಅಲ್ಲದ ಮಾತು ಗಂಭೀರತೆಯನ್ನು ಕಡಿಮೆ ಮಾಡುತ್ತದೆ. ಇಲ್ಲೂ ಖಳನಾಯಕಿಯರು ಇರಲೇಬೇಕು ಎನ್ನುವ ಸೂತ್ರವನ್ನು ಪಾಲಿಸಿದ್ದಾರೆ. ಜಮದಗ್ನಿ ತಾಯಿಯ ಚಿತ್ರಣ ಮೂಲಕಥೆಗೆ ತಕ್ಕಂತೆ ಇಲ್ಲ ಎಂದು ಅನ್ನಿಸಿತು.

—ಆರ್. ವೀರೇಶ್ ಕುಮಾರ್, ಬೆಂಗಳೂರು